ವಿಷಯ : ಕೃಷಿ ಪಾಠಶಾಲೆ ಮತ್ತು ಬೀಜೋತ್ಪಾದನಾ ಕೇಂದ್ರದ 61 ಎಕರೆ 35 ಗುಂಟೆ 4 ಆಣೆ ಪ್ರದೇಶವನ್ನು ಕೃಷಿ ವಿಶ್ವವಿದ್ಯಾಲಯ, ಧಾರವಾಡಕ್ಕೆ ಹಸ್ತಾಂತರಿಸುವ ಬಗ್ಗೆ.

**ಓದಲಾಗಿದೆ :-**

1. ಕುಲಪತಿಯವರು/ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಧಾರವಾಡರವರ ದಿನಾಂಕ : 03–01–2009 ರಿಂದ 27–07–2012ರವರೆಗಿನ ಪತ್ರಗಳ ಸಂಖ್ಯೆ : ಕುಸ/ಕು.ಬೀ.ಕೇ/2012–13.
2. ಆಯುಕ್ತರು, ಕೃಷಿ ಇಲಾಖೆ, ಇವರ ದಿನಾಂಕ : 31–08–2009 ಮತ್ತು 08–06–2012ರ ಪತ್ರ ಸಂಖ್ಯೆ : ಉಕೃನಿ/ಸ್ಟೇಫಾ/ತಾಂ–2/ಬಿ.ಕೇಂ.ಹಾ/ಕೃವಿಧಾ/21/2008–09.
3. ಕೃಷಿ ನಿರ್ದೇಶಕರ ಪತ್ರ ಸಂಖ್ಯೆ:ಉಕೃನಿ:(ಸ್ಟೇ.ಫಾ):ತಾಂ2/ಬೀ.ಕೇ:ಹ/ಕೃವಿಧಾ/21:2008–09ರ ದಿನಾಂಕ:09.08.2012.

**ಪ್ರಸ್ತಾವನೆ :-**

ಮೇಲೆ (1)ರಲ್ಲಿ ಓದಲಾದ ದಿನಾಂಕ : 03–01–2009ರ ಪತ್ರದಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯವು ಕರಾವಳಿ ಸನ್ನಿವೇಶಕ್ಕೆ ಅನುಗುಣವಾದ ಕೃಷಿ ಸಮಸ್ಯೆಗಳ ಕುರಿತು ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗಿದ್ದು ಕರಾವಳಿಯ ಭಾಗದಲ್ಲಿ ಯಾವುದೇ ಸಂಶೋಧನಾ ಕೇಂದ್ರವು ಇಲ್ಲವಾದ್ದರಿಂದ ಕೃಷಿ ಪಾಠಶಾಲೆ, ಕುಮಟಾದ ಜಮೀನನ್ನು ಕೃಷಿ ವಿಶ್ವವಿದ್ಯಾಲಯಕ್ಕೆ ನೀಡುವಂತೆ ಪ್ರಸ್ತಾಪಿಸಿದ್ದರು. ಮುಂದುವರೆದು 2011–12ನೇ ಸಾಲಿನಿಂದ ಕೃಷಿ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಕೃಷಿ ವಿಶ್ವವಿದ್ಯಾಲಯದ ಸಂಸ್ಥೆಗಳಲ್ಲಿ ಸರ್ಕಾರದ ಸೂಚನೆಯ ಮೇರೆಗೆ ಪ್ರಾರಂಭಿಸಿದ್ದು ಡಿಪ್ಲೊಮಾ ತರಗತಿಗಳನ್ನು ನಡೆಸಲು ಮತ್ತು ಡಿಪ್ಲೊಮಾಗೆ ಸಂಬಂಧಿಸಿದಂತೆ ಪ್ರಾತ್ಯಕ್ಷಿಕೆ ಹಾಗೂ ಪ್ರಾಯೋಗಿಕ ತರಬೇತಿಗಳನ್ನು ನೀಡಬೇಕಾಗಿದ್ದು ಅಗತ್ಯವಾದ ಸೌಲಭ್ಯಗಳು ಇಲ್ಲವೆಂದು ಪ್ರಸ್ತಾಪಿಸಿದ್ದಾರೆ. ಮುಂದುವರೆದು ಬೀಜೋತ್ಪಾದನೆಯನ್ನೂ ಕೈಗೊಳ್ಳಬೇಕಾಗಿದ್ದು ಸಾಕಷ್ಟು ಜಮೀನು ಇಲ್ಲವಾದ್ದರಿಂದ ಕುಮಟಾದ ಕೃಷಿ ಪಾಠಶಾಲೆ ಮತ್ತು ಪೂರ್ಣವಾಗಿ ಬಳಕೆಯಲ್ಲಿ ಇಲ್ಲವಾದ ಬೀಜೋತ್ಪಾದನೆ ಕೇಂದ್ರದ ಜಮೀನನ್ನು ಹಸ್ತಾಂತರಿಸುವಂತೆ ಕೋರಿದ್ದಾರೆ.

ಕೃಷಿ ಆಯುಕ್ತರು ಮೇಲೆ (2)ರಲ್ಲಿ ಓದಲಾದ ಪತ್ರಗಳಲ್ಲಿ ಷರತ್ತು ಮತ್ತು ನಿಬಂಧನೆಗಳ ಮೇರೆಗೆ ಕೃಷಿ ಪಾಠಶಾಲೆಯ 61ಎ–35–04ಆ.ಯಷ್ಟು ಜಮೀನನ್ನು ಹಸ್ತಾಂತರಿಸಲು ಸರ್ಕಾರದ ಆದೇಶವನ್ನು ಕೋರಿದ್ದಾರೆ. ಈ ನಡುವೆ ದಿನಾಂಕ : 18–07–2012ರ ಸರ್ಕಾರಿ ಪತ್ರ ಮುಖೇನ ಮೇಲ್ಕಂಡ ಆಸ್ತಿಯನ್ನು ಹಸ್ತಾಂತರಗೊಳಿಸಿಕೊಳ್ಳುವ ಬಗ್ಗೆ ಕೃಷಿ ಆಯುಕ್ತರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವಂತೆ ಧಾರವಾಡ ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿ ಆಯುಕ್ತರಿಗೆ ನಿರ್ದೇಶಿಸಲಾಗಿತ್ತು. ಅದರಂತೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಸಚಿವರು ದಿನಾಂಕ : 27–07–2012ರ ತಮ್ಮ ಪತ್ರದಲ್ಲಿ ಕೃಷಿ ಆಯುಕ್ತರನ್ನು ಸಂಪರ್ಕಿಸಿ ಹಸ್ತಾಂತರಿಸಲು ಕೋರಿದ್ದಾರೆ. ಕೃಷಿ ನಿರ್ದೇಶಕರು ಮೇಲೆ(3)ರಲ್ಲಿ ಓದಲಾದ ದಿನಾಂಕ:09.08.2012ರ ಪತ್ರದಲ್ಲಿ ಇಲಾಖೆಯು ವಿಧಿಸಿರುವ ಷರತ್ತಿಗೆ ಒಳಪಟ್ಟು ಗುತ್ತಿಗೆ ಆಧಾರದಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡಕ್ಕೆ ಜಮೀನು ಹಸ್ತಾಂತರಿಸಲು ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಕೃಇ 4 ಕೃವಿಧಾ 2011,**

**ಬೆಂಗಳೂರು, ದಿನಾಂಕ : 25–08–2012.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಕೃಷಿ ಇಲಾಖೆಯ ಕೃಷಿ ಪಾಠಶಾಲೆ ಮತ್ತು ಬೀಜೋತ್ಪಾದನಾ ಕೇಂದ್ರ, ಕುಮಟಾ (ಉತ್ತರ ಕನ್ನಡ ಜಿಲ್ಲೆ)ದಲ್ಲಿನ ಒಟ್ಟು 61 ಎಕರೆ 35 ಗುಂಟೆ 4 ಆಣೆ ಜಮೀನನ್ನು ಈಗಿರುವ ಸ್ಥಿತಿಯಲ್ಲಿ ಲಭ್ಯವಿರುವ ಎಲ್ಲಾ ಸ್ಥಿರಾಸ್ತಿಗಳೊಂದಿಗೆ ಗುತ್ತಿಗೆ ನೀಡಲು ಈ ಕೆಳಕಂಡ

ಷರತ್ತುಗಳನ್ವಯ ಧಾರವಾಡ. ಕೃಷಿ ವಿಶ್ವವಿದ್ಯಾಲಯ ಹಾಗೂ ಕೃಷಿ ಇಲಾಖೆಯ ನಡುವೆ ಆಗಿರುವ ಒಡಂಬಡಿಕೆಯನ್ನು ಅಂತಿಮಗೊಳಿಸಿ ಖಚಿತಪಡಿಸಿಕೊಳ್ಳುವ ಷರತ್ತಿನ ಮೇರೆಗೆ ನಿಯಮಗಳನ್ನು ಪರಿಶೀಲಿಸಿ ವರ್ಗಾಯಿಸಿ ಹಸ್ತಾಂತರಿಸಲು ಅನುಮೋದನೆ ನೀಡಲಾಗಿದೆ :-

1. ಕುಮಟಾದಲ್ಲಿರುವ ಕೃಷಿ ಪಾಠಶಾಲೆ ಮತ್ತು ಬೀಜೋತ್ಪಾದನಾ ಕೇಂದ್ರದ 61ಎ-35ಗುಂ-04ಆ. ಯಷ್ಟು ಜಮೀನನ್ನು ಕೃಷಿ ಸಂಶೋಧನಾ ಕೇಂದ್ರ ಹಾಗೂ ವಿಸ್ತರಣಾ ಕೇಂದ್ರವನ್ನು ಮತ್ತು ಕೃಷಿ ಡಿಪ್ಲೊಮಾ ಕೋರ್ಸ್‌ನ ಪ್ರಾರಂಭಿಸುವ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಹುದು.
2. ಸದರಿ ಬೀಜೋತ್ಪಾದನಾ ಕೇಂದ್ರದಲ್ಲಿ ಲಭ್ಯವಿರುವ ಎಲ್ಲಾ ಚರಾಸ್ತಿಗಳನ್ನು ಕೃಷಿ ಇಲಾಖೆಯ ಸುಪರ್ಧಿಗೆ ವಹಿಸುವುದು.
3. ಸದರಿ ಜಮೀನಿನ ಒಡೆತನವು ಕೃಷಿ ಇಲಾಖೆಯಲ್ಲಿರುತ್ತದೆ. ಸದರಿ ಜಮೀನಿನಲ್ಲಿರುವ ಕಟ್ಟಡಗಳಿಗೆ ಬೇಕಾದ ದುರಸ್ತಿಗಳನ್ನು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ತಮ್ಮ ಖರ್ಚಿನಲ್ಲಿಯೇ ಆಗಿಂದಾಗ್ಗೆ ಕೈಗೊಂಡು ಕಟ್ಟಡಗಳನ್ನು ಸುಸ್ಥಿತಿಯಲ್ಲಿಡತಕ್ಕದ್ದು.
4. ವಿದ್ಯುತ್ ಹಾಗೂ ನೀರಿನ ಸಂಪರ್ಕಕ್ಕೆ ತಗಲುವ ವೆಚ್ಚವನ್ನು-ಕೃಷಿ ವಿಶ್ವವಿದ್ಯಾಲಯ, ಧಾರವಾಡ ಭರಿಸತಕ್ಕದ್ದು;
5. ಮುಂದೆ ಕೃಷಿ ಇಲಾಖೆಯು ಸದರಿ ಸೌಲಭ್ಯಗಳನ್ನು ಇತರೆ ಸರ್ಕಾರಿ ಉದ್ದೇಶಕ್ಕಾಗಿ ಬಳಸಬೇಕಾದ ಸಂದರ್ಭ ಒದಗಿದಲ್ಲಿ ಸದರಿ ಕಟ್ಟಡ ಹಾಗೂ ನಿವೇಶನವನ್ನು ಕೃಷಿ ಇಲಾಖೆ, ಧಾರವಾಡ ತೆರವು ಮಾಡತಕ್ಕದ್ದು.
6. ಜಮೀನಿನ ಯಾವುದೇ ಭಾಗವನ್ನು ಗುತ್ತಿಗೆ ಆಧಾರದ ಮೇಲಾಗಲೀ ಅಥವಾ ಮಾರಾಟವನ್ನು ಬೇರೊಬ್ಬರಿಗೆ ಮಾಡಬಾರದು.
7. ಕೃಷಿ ವಿಶ್ವವಿದ್ಯಾಲಯ, ಧಾರವಾಡ ಸದರಿ ಕಾರ್ಯಕ್ರಮವನ್ನು ಕೈಗೊಳ್ಳುವ ಸಲುವಾಗಿ ಅಭಿವೃದ್ಧಿಗಾಗಿ ತಗಲುವ ವೆಚ್ಚವನ್ನು ಅವರೇ ಭರಿಸತಕ್ಕದ್ದು. ಈ ಬಗ್ಗೆ ಕೃಷಿ ಇಲಾಖೆಯು ಯಾವುದೇ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಿಲ್ಲ.
8. ಒಂದು ವೇಳೆ ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರು ಕೃಷಿ ಕ್ಷೇತ್ರದ ಜಮೀನನ್ನು ಹಿಂದಕ್ಕೆ ಕೃಷಿ ಇಲಾಖೆಗೆ ವಾಪಸ್ಸು ನೀಡಬೇಕಾದ ಸನ್ನಿವೇಶ ಒದಗಿದಲ್ಲಿ ತಮ್ಮ ಅವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯ ಮತ್ತು ಕಟ್ಟಡದ ಮೌಲ್ಯ ಇತ್ಯಾದಿಗಳನ್ನು ಕೃಷಿ ಇಲಾಖೆಯು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ವಾಪಸ್ಸು ನೀಡುವುದಿಲ್ಲ.
9. ಕುಮಟಾದಲ್ಲಿರುವ ಕೃಷಿ ಪಾಠಶಾಲೆ ಮತ್ತು ಬೀಜೋತ್ಪಾದನಾ ಕೇಂದ್ರದ 61ಎ-35ಗುಂ-04ಆ. ಯಷ್ಟು ಜಮೀನನ್ನು ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ 10 ವರ್ಷಗಳ ಅವಧಿಗೆ ಮಾತ್ರ ಬಳಸಲು ಅನುಮತಿಸಿದೆ.
10. ಒಂದು ವೇಳೆ ವಿಧಿಸಲಾದ ಷರತ್ತುಗಳನ್ನು ಕೃಷಿ ವಿಶ್ವವಿದ್ಯಾಲಯವು ಪಾಲಿಸದಿದ್ದಲ್ಲಿ ಜಮೀನನ್ನು ಕೃಷಿ ಇಲಾಖೆಗೆ ವಾಪಸ್ಸು ಪಡೆದುಕೊಂಡು, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ದಂಡನೆ ವಿಧಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಮಂಜುನಾಥ/ಪಾಟೀಲ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಕೃಷಿ ಸೇವೆಗಳು).

ಇವರಿಗೆ :-

1. ಮಹಾಲೇಖಪಾಲರು, ಕರ್ನಾಟಕ (ಲೆಕ್ಕಪತ್ರ/ತನಿಖೆ), ಬೆಂಗಳೂರು.
2. ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಕೃಷಿನಗರ, ಧಾರವಾಡ.
3. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4. ಕುಲಸಚಿವರು, ಕೃಷಿ ವಿಶ್ವವಿದ್ಯಾಲಯ, ಧಾರವಾಡ.

6. [illegible]
7. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆರವರ ಆಪ್ತ ಕಾರ್ಯದರ್ಶಿ,
8. ಸರ್ಕಾರದ ಅಪರ ಕಾರ್ಯದರ್ಶಿ, ಕೃಷಿ ಇಲಾಖೆಯವರ ಆಪ್ತ ಸಹಾಯಕರು.
9. ಸರ್ಕಾರದ ಉಪ ಕಾರ್ಯದರ್ಶಿ–2, ಕೃಷಿ ಇಲಾಖೆರವರ ಆಪ್ತ ಸಹಾಯಕರು.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.